**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 504/2015**

**ಪಿಡಬ್ಲ್ಯೂ-18**

**ಸಿಡಬ್ಲ್ಯೂ-27**

| | |
|---|---|
| ಸಾಕ್ಷಿದಾರರ ಹೆಸರು | ಡಾ. ಕುಮುದಾ |
| ಗಂಡನ ಹೆಸರು | ಡಾ. ಎಸ್ ಹೆಚ್ ಬೆಲ್ಲದ |
| ವಯಸ್ಸು | 60 ವರ್ಷ |
| ಕೆಲಸ | ನಿವೃತ್ತ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞೆ |
| ವಾಸ | ಮೈಸೂರು |

**ದಿನಾಂಕ 26-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ನಾನು ಅಗಸ್ಟ 2011 ರಿಂದ ಸಪ್ಟೆಂಬರ್ 2015 ರವಗೆಗೆ ಮಹಿಳಾ ವೈದ್ಯಾಧೀಕಾರಿಯಾಗಿ ಸಾರ್ವಜನಿಕ ಆಸ್ಪತ್ರೆ ಕೆ. ಆರ್ ನಗರ ಸೇವೆ ಸಲ್ಲಿಸಿದ್ದೇನೆ.

ದಿಃ 02.10.2014 ರಂದು ಬೆಳಿಗ್ಗೆ 10.030 ಗಂಟೆಯಿಂದ 12.00 ಸುಮಯದಲ್ಲಿ ನಿಂಗಮ್ಮ W/o ಲೇಟ್ ಕೆಂಪೇಗೌಡರವರ ಶವ ದಪರೀಕ್ಷೆಯನ್ನು ನಾನು ಮಾಡಿರುತ್ತೇನೆ. ನಂತರ ನಾನು ಶವ ತನಿಖೆ ವರದಿಯನ್ನು ಮಾಡಿರುತ್ತೇನೆ. ನನ್ನ ವರದಿಯಲ್ಲಿ ನಾನು ಮೃತ ನಿಂಗಮ್ಮ ರವರರು ಹೃದಯಘಾತದಿಂದ ಮೃತಪಟ್ಟಿರುತ್ತಾರೆ. ಯಾವುದಾದರೂ ಒಬ್ಬ ವ್ಯಕ್ತಿ ದೊಣ್ಣೆಯಿಂದ ಎದೆಯ ಭಾಗಕ್ಕೆ ಹೊಡೆದಾಗ ನನ್ನ ಶವ ಪರೀಕ್ಷೆಯ ವರದಿಯಲ್ಲಿ

ನೀಡಿರುವ ಹೃದಯಘಾತ ಆಗುವ ಎಂಬ ಪ್ರಶ್ನೆಗೆ ಸಾಕ್ಷಿ ಈ ಪ್ರಕರಣವನ್ನು ಪರೀಕ್ಷೆ ಮಾಡಲಾಗಿ ಮೃತ ನಿಂಗಮ್ಮ ರವರ ಹೃದಯದ ಪರಿಸ್ಥಿತಿ ಮತ್ತು ಅವರ ವಯಸ್ಸನ್ನು ಗಣನೆಗೆ ತೆಗೆದುಕೊಂಡಾಗ ಸದರಿ ನಿಂಗಮ್ಮ ರವರಿಗೆ ದೊಣ್ಣೆಯಿಂದ ಹೃದಯದ ಭಾಗಕ್ಕೆ ಹಲ್ಲೆ ಮಾಡಿದಾಗ ಸದರಿ ಶವತನಿಖಾ ವರದಿಯಲ್ಲಿ ನೀಡಿರುವ ಅಭಿಪ್ರಾಯದಂತೆ ಹೃದಯಾಘಾತ ಆಗುವ ಸಂಭವವಿದೆ. ಆದರೆ, ಮೃತ ನಿಂಗಮ್ಮ ರವರಿಗೆ ಬೇರೆಯ ಭಾಗಕ್ಕೆ ಹಲ್ಲೆ ಮಾಡಿದಾಗ ಗಾಬರಿಯಾಗಿ ನಿಂಗಮ್ಮ ರವರಿಗೆ ಹೃದಯಾಘಾತ ಆಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿ, ಆಗಬಹುದು ಮತ್ತು ಆಗದೇ ಇರಬಹುದು ಅದನ್ನು ಸ್ಪಷ್ಟವಾಗಿ ಹೇಳಲು ಆಗುವುದಿಲ್ಲವೆಂದು ಸಾಕ್ಷಿಯು ನುಡಿದಿರುತ್ತಾರೆ. ಸಾಕ್ಷಿಗೆ ಒಂದು ಶವಪರೀಕ್ಷಾ ವರದಿಯನ್ನು ತೋರಿಸಿದ್ದು ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಗಿದೆ. ಅದೇ ರೀತಿ ಸಾಕ್ಷಿಯು ದಿಃ 05.12.2014 ರಂದು ವೃತ್ತನಿರೀಕ್ಷಕರು ಒಂದು ದೊಣ್ಣೆಯನ್ನು ಪರೀಕ್ಷೆ ಮಾಡಿ ವರದಿಯನ್ನು ನೀಡುವಂತೆ ಸಲ್ಲಿಸಿರುವ ಒಂದು ಮನವಿ ಪತ್ರವನ್ನು ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪತ್ರವನ್ನು ನಿಪಿ. 15 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು. ಅದೇ ರೀತಿ ದಿಃ 15.12.2014 ರಂದು ವೃತ್ತನಿರೀಕ್ಷಕರು ಪಿ.ಎಂ ವರದಿಯ ಬಗ್ಗೆ ಅಂತಿಮ ಅಭಿಪ್ರಾಯವನ್ನು ನೀಡುವಂತೆ ಸಲ್ಲಿಸಿರುವ ಒಂದು ಮನವಿ ಪತ್ರವನ್ನು ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪತ್ರವನ್ನು ನಿಪಿ. 16 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸದರಿ ಮೇಲೆ ಹೇಳಿರುವ ಎರಡು ಪತ್ರಗಳಿಗೆ ನೀಡಿರುವ ಉತ್ತರದ ವೈದ್ಯಕೀಯ ಪ್ರಮಾಣ ಪತ್ರವನ್ನು ಮತ್ತು ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.17 ಮತ್ತು ನಿಪಿ.17(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಶ್ರೀ. ಹೆಚ್.ಕೆ.ಸಿ ಆರೋಪಿ ಪರ ವಕೀಲರುಃ</u>**

ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಗೆ ನ್ಯಾಯಾಲಯದ ಮುಂದೆ ಇರುವ ಎಂ.ಓ ಒಂದು ಊರುಗೋಲಿನಿಂದ ಹಲ್ಲೆ ಮಾಡಿದಾಗ ಸದರಿ ಭಾಗದಲ್ಲಿ ರಕ್ತ ಹೆಪ್ಪುಗಟ್ಟುತ್ತದೆ ಎಂದರೆ ಆಗಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಮೃತ ನಿಂಗಮ್ಮ ರವರನ್ನು ಶವಪರೀಕ್ಷೆ ಮಾಡಿದ ಕಾಲದಲ್ಲಿ ಅವರ ತೊಡೆಯ ಭಾಗದಲ್ಲಿ ಮೂಳೆ ಮುರಿದ ಜಾಗದಲ್ಲಿ ಯಾವುದೇ ರಕ್ತ ಹೆಪ್ಪುಗಟ್ಟಿರುವ ರೀತಿಯಲ್ಲಿ ಹೊರಗಾಯಗಳು ಕಂಡುಬಂದಿರುವುದಿಲ್ಲ. ಯಾವುದಾದರೂ ಒಬ್ಬ ವಯಸ್ಸಾದ ವ್ಯಕ್ತಿ ಊರಿಗೋಲಿನ ಸಹಾಯದಿಂದ ನಡೆಯುವಾಗ ಆಯ ತಪ್ಪಿ ಗಡುಸಾದ ವಸ್ತುಗಳ ಮೇಲೆ ಬಿದ್ದರೆ ನಿಪಿ.12 ರಲ್ಲಿ ನೀಡಿರುವ ಗಾಯಗಳಾಗುವ ಸಾಧ್ಯತೆ ಇದೆ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್ )

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ

-